




ಮೊನಾರ್ಕ್ ಬಟರ್‌ಫ್ಲೈ ನ್ಯಾಚುರಲ್ ಪ್ರಿಸರ್ವ್‌ನಲ್ಲಿ ಲೇಖಕಿ.

ಜುಲೈ– ಆಗಸ್ಟ್ ತಿಂಗಳಲ್ಲಿ ಮುಂದಿನ ತಲೆಮಾರಿನ ಚಿಟ್ಟೆಗಳು ಹುಟ್ಟುತ್ತವೆ. ಮೂರು ತಲೆಮಾರಿನ ನಂತರ ಹುಟ್ಟಿಬಂದ ಈ ಚಿಟ್ಟೆಗಳಿಗೆ ಹಿಂದಿನ ತಲೆಮಾರಿಗಿರದ ಕೆಲ ವೈಶಿಷ್ಟ್ಯಗಳಿರುತ್ತವೆ. ಮೊದಲನೆಯದು ಇವು ಪ್ರಾಯಕ್ಕೆ ಬರುವುದು ನಿಧಾನ. ಸಾಮಾನ್ಯವಾಗಿ ಎಲ್ಲಾ ಚಿಟ್ಟೆಗಳೂ ಕೋಶದಿಂದ ಹೊರಬಂದ ಒಂದೆರಡು ವಾರದಲ್ಲೇ ಸಂಗಾತಿಯನ್ನರಸುತ್ತವೆ. ಆದರೆ ಕೆನಡ ದೇಶದಲ್ಲಿ ಹುಟ್ಟಿದ ಚಿಟ್ಟೆಗಳು ಸುಮಾರು ಎಂಟು ತಿಂಗಳ ನಂತರವಷ್ಟೇ ವಯಸ್ಕರಾಗುವುದು. ಎರಡನೆಯ ವೈಶಿಷ್ಟ್ಯ ಅವುಗಳ ಜೀವಿತಾವಧಿಗೆ ಸಂಬಂಧ ಪಟ್ಟದ್ದು. ಹೆಚ್ಚಿನ ಚಿಟ್ಟೆಗಳು ಬದುಕುವುದು ಸುಮಾರು ಒಂದು ತಿಂಗಳು ಮಾತ್ರ. ಆದರೆ ಕೆನಡದ ಈ ಚಿಟ್ಟೆಗಳು ಒಂಭತ್ತು ತಿಂಗಳು ಬದುಕುತ್ತವೆ.

ಮೂರನೆಯದು ಈ ಚಿಟ್ಟೆಗಳ ಬದುಕಿನ ರೀತಿಗೆ ಸಂಬಂಧಿಸಿದ್ದು. ಸೆಪ್ಟೆಂಬರ್ ತಿಂಗಳಲ್ಲಿ ಕೆನಡಕ್ಕೆ ಚಳಿಗಾಲ ಪ್ರವೇಶವಾಗುತ್ತದೆ. ಚಿಟ್ಟೆಗಳು ತೀವ್ರ ಚಳಿಯಲ್ಲಿ ಬದುಕುಳಿಯಲಾರವು. ಅಲ್ಲದೆ ಚಳಿಗಾಲದಲ್ಲಿ ಹಿಮ ತುಂಬಿರುವುದರಿಂದ ಅವುಗಳ ಆಹಾರವಾದ ಮಕರಂದ ದೊರೆಯುವುದಿಲ್ಲ. ಈ ಎಲ್ಲ ಪ್ರಕೃತಿ ವಿಕೋಪವನ್ನು ಮೊದಲೇ ಅರಿತವರಂತೆ ನ್ಯಾಚುರಲ್ ಬ್ರಿಡ್ಜಸ್‌ನ ನಾಲ್ಕನೇ ತಲೆಮಾರಿನ ನಂತರದ ಚಿಟ್ಟೆಗಳು ಕೆನಡ ದೇಶ ಬಿಟ್ಟು ವಲಸೆ ಹೊರಡುತ್ತವೆ.

## ದಾರಿ ತೋರಿಸುವವರು ಯಾರು?

ಇವು ಕೆನಡದಿಂದ ಹೊರಟು ಪ್ರತಿದಿನ ಹಗಲಲ್ಲಿ ಗುಂಪು ಗುಂಪಾಗಿ 60ರಿಂದ 100 ಮೈಲು ದೂರ ಹಾರಿಕೊಂಡು ರಾತ್ರೆ ಮರಗಳಲ್ಲಿ ವಿಶ್ರಾಂತಿ ಪಡೆದು ಆಹಾರವಿಲ್ಲದೆ ಉಪವಾಸ ಇದ್ದು ಒಂದೆರಡು ತಿಂಗಳ ಪ್ರಯಾಣದ ನಂತರ ಸುಮಾರು 3000 ಮೈಲು ದೂರವಿರುವ ನ್ಯಾಚುರಲ್ ಬ್ರಿಡ್ಜಸ್ ತಲುಪುತ್ತವೆ. ಈ ಸಾವಿರಾರು ಮೈಲು ವಲಸೆಗಿಂತಲೂ ಅಚ್ಚರಿ ಹುಟ್ಟಿಸುವುದು ಇನ್ನೊಂದು ವಿಷಯ. ಅದೆಂದರೆ ಈ ಚಿಟ್ಟೆಗಳಿಗೆ ಆ ಬೆಚ್ಚಗಿನ ಪ್ರದೇಶದ ಗುರುತು ಸಿಗುವುದು ಹೇಗೆ? ದಾರಿ ತೋರಿಸುವವರು ಯಾರು?

ಏಕೆಂದರೆ ಇವು ಹುಟ್ಟಿದ್ದು ಕೆನಡದಲ್ಲಿ. ನಾಲ್ಕು ತಲೆಮಾರಿನ ಹಿಂದಿನ ಚಿಟ್ಟೆಗಳು ನ್ಯಾಚುರಲ್ ಬ್ರಿಡ್ಜಸ್ ಪ್ರದೇಶದಲ್ಲಿ ಚಳಿಗಾಲ ಕಳೆದದ್ದು ಹೌದು. ಆದರೆ ನಾಲ್ಕು ತಲೆಮಾರಿನ ನಂತರ ಹುಟ್ಟಿದ ಈ ಚಿಟ್ಟೆಗಳು ಅದೇ ಪ್ರದೇಶವನ್ನು ಹುಡುಕಿಕೊಂಡು ಹೋಗಲು ಪ್ರೇರಣೆ ಏನು? ದಾರಿ–ದಿಕ್ಕು ಅವುಗಳಿಗೆ ಹೇಗೆ ಗೊತ್ತು? ಎಂದೂ ನೋಡಿರದ ಆ ಜಾಗದಲ್ಲಿ ಒಳ್ಳೆ ವಾತಾವರಣವಿದೆಯೆಂದು ಗೊತ್ತಾದದ್ದು ಹೇಗೆ? ಇಂತಹ ಹಲವಾರು ಪ್ರಶ್ನೆಗಳಿಗೆ ಇನ್ನೂ ಸರಿಯಾದ ಉತ್ತರ ದೊರಕಿಲ್ಲವಂತೆ. ಸೃಷ್ಟಿಯ ವೈಚಿತ್ರ್ಯವೆಂದರೆ ಇದೇ ಅಲ್ಲವೇ?

ಆದರೆ ಸಾವಿರಾರು ವರ್ಷಗಳಿಂದ ನಡೆಯುತ್ತಾ ಬಂದಿರುವ ಈ ಮಹಾ ವಲಸೆ ಮಾತ್ರ ಈಗಲೂ ಪ್ರತಿ ವರ್ಷ ನಡೆಯುತ್ತಿರುತ್ತದೆ. ಪ್ರಪಂಚದಲ್ಲಿ ಹಲವಾರು ಪ್ರಾಣಿ, ಪಕ್ಷಿ, ಕೀಟ, ಮೀನುಗಳು ಆಹಾರ ಹುಡುಕಿಕೊಂಡು ಅಥವಾ ಚಳಿಯಿಂದ ರಕ್ಷಿಸಿಕೊಳ್ಳಲು ತಮಗೆ ಪರಿಚಿತವಾದ ಜಾಗಕ್ಕೆ ಗುರುತಿನ ದಾರಿಯಲ್ಲೇ ವಲಸೆ ಹೋಗುತ್ತವೆ. ಆದರೆ ಮೊನಾರ್ಕ್ ಚಿಟ್ಟೆಗಳ ಮಟ್ಟಿಗೆ ವಲಸೆ ಹೋಗುವ ಚಿಟ್ಟೆಗಳು ನಾಲ್ಕು ತಲೆಮಾರಿನ ನಂತರದ ಚಿಟ್ಟೆಗಳು. ಇವುಗಳಿಗೆ ಜಾಗವೂ ಅಪರಿಚಿತ. ದಾರಿಯೂ ಅಪರಿಚಿತ. ಮಾರ್ಗದರ್ಶಿಯ ನೆರವೂ ಇರುವುದಿಲ್ಲ ಮತ್ತು ನೂರಿನ್ನೂರು ಮೈಲು ಪ್ರಯಾಣವಲ್ಲ; 3,000 ಮೈಲಿನ ಯಾತ್ರೆ! ತನ್ನ ಕುಟುಂಬದ ಅಜ್ಜ, ಹಿರಿಯಜ್ಜರು ಹುಟ್ಟಿ ಬೆಳೆದ ಮೂಲಸ್ಥಾನಕ್ಕೆ ಒಂದು ಚಿಟ್ಟೆಯ ಹಿಂಡು ಹೇಗೆ ವಾಪಸ್ಸಾಗುವುದು ಅಚ್ಚರಿಯೇ ಸರಿ.